ದಾವಣಗೆರೆ ವಿಶ್ವವಿದ್ಯಾನಿಲಯ
ಕುಲಸಚಿವರು(ಪರೀಕ್ಷಾಂಗ)ರವರ ಕಛೇರಿ, ಶಿವಗಂಗೋತ್ರಿ, ದಾವಣಗೆರೆ -577007
ದೂರವಾಣಿ ಸಂ.08192-208420

---

ಸಂಖ್ಯೆ:ದಾವಿವಿ:ಪವಿ:ಆಶಾ:2020-21/ 458 ದಿನಾಂಕ: 24-07-2020

**:2019-20ನೇ ಸಾಲಿನ ಪರೀಕ್ಷೆ ನಡೆಸಲು ಮಾರ್ಗಸೂಚಿಗಳು:**

1. ಕಾಲೇಜು/ಸ್ನಾತಕೋತ್ತರ ವಿಭಾಗ/ಸ್ನಾತಕೋತ್ತರ ಕೇಂದ್ರ ಆವರಣ ಹಾಗೂ ವಸತಿಗೃಹಗಳನ್ನು ಪರೀಕ್ಷೆಗೂ ಮೊದಲು ಸ್ಯಾನಿಟೈಸ್ ಮಾಡುವುದು.
2. ಕಾಲೇಜು/ಸ್ನಾತಕೋತ್ತರ ವಿಭಾಗ/ಸ್ನಾತಕೋತ್ತರ ಕೇಂದ್ರ ಅಥವಾ ವಸತಿಗೃಹವನ್ನು ಜಿಲ್ಲಾಡಳಿತ ಕ್ವಾರಂಟೈನ್‌ಗೆ ಬಳಸಿಕೊಂಡಿದ್ದಲ್ಲಿ ಪರೀಕ್ಷೆ ಪ್ರಾರಂಭಕ್ಕೂ ಮುನ್ನ ಕಾಲೇಜು/ಸ್ನಾತಕೋತ್ತರ ವಿಭಾಗ/ಸ್ನಾತಕೋತ್ತರ ಆವರಣ ಹಾಗೂ ವಸತಿಗೃಹವನ್ನು ಮರಳಿ ಪಡೆಯಲು ಕ್ರಮ ಕೈಗೊಳ್ಳುವುದು.
3. ಕಾಲೇಜು/ಸ್ನಾತಕೋತ್ತರ ವಿಭಾಗ/ಸ್ನಾತಕೋತ್ತರ ಕೇಂದ್ರವು ಕಂಟೇನ್‌ಮೆಂಟ್ ಏರಿಯಾದಲ್ಲಿ ಬರುತ್ತಿದ್ದಲ್ಲಿ ಅಥವಾ ಪರೀಕ್ಷೆ ನಡೆಯುವ ಸಂದರ್ಭದಲ್ಲಿ ಕಂಟೇನ್‌ಮೆಂಟ್ ಏರಿಯಾದಲ್ಲಿ ಗುರುತಿಸಲ್ಪಟ್ಟಲ್ಲಿ ಅಂತಹ ಕಾಲೇಜು/ಸ್ನಾತಕೋತ್ತರ ವಿಭಾಗ/ಸ್ನಾತಕೋತ್ತರ ಕೇಂದ್ರವನ್ನು ಪರೀಕ್ಷಾ ಕೇಂದ್ರವನ್ನಾಗಿ ಮಾಡಲಾಗುವುದಿಲ್ಲ. ವಿದ್ಯಾರ್ಥಿಗಳಿಗೆ ಬದಲಿ ವ್ಯವಸ್ಥೆ ಮಾಡಲಾಗುವುದು.
4. ಪ್ರತಿಯೊಂದು ಕಾಲೇಜು/ಸ್ನಾತಕೋತ್ತರ ವಿಭಾಗ/ಸ್ನಾತಕೋತ್ತರ ಕೇಂದ್ರದಲ್ಲೂ ಒಂದು ರೂಮನ್ನು ಪರ್ಯಾಯ ಕ್ವಾರಂಟೈನ್ ವ್ಯವಸ್ಥೆಗಾಗಿ ಬಳಸಲು ತಯಾರಿಯಲ್ಲಿಟ್ಟುಕೊಳ್ಳುವುದು. ಪರೀಕ್ಷೆಯ ಸಂದರ್ಭದಲ್ಲಿ ಕೋರೋನಾ ಶಂಕೆ ಕಂಡುಬಂದಲ್ಲಿ ಅಂತಹವರನ್ನು ಈ ಕೋಣೆಗೆ ವರ್ಗಾಯಿಸಿ ಸಂಬಂಧಿತ ಅಧಿಕಾರಿಗಳ ಗಮನಕ್ಕೆ ತರುವುದು.
5. ಇತರೆ ರಾಜ್ಯದ ವಿದ್ಯಾರ್ಥಿಗಳು ತಮ್ಮ ಸ್ವಂತ ಊರಿಗೆ ಈಗಾಗಲೇ ಹೋಗಿದ್ದಲ್ಲಿ ಅಂತಹವರನ್ನು ಪರೀಕ್ಷೆಯ ಪ್ರಾರಂಭಕ್ಕೂ ಮುನ್ನಾ ಆಗಮಿಸಿ ಕರ್ನಾಟಕ ಸರ್ಕಾರದ ನಿಯಮದಂತೆ ಸಾಂಸ್ಥಿಕ ಹಾಗೂ ಗೃಹ ಕ್ವಾರಂಟೈನ್ ಅವಧಿಯನ್ನು ಯಶಸ್ವಿಯಾಗಿ ಮುಗಿಸಿಕೊಳ್ಳುವುದು ಅವರ ಜವಾಬ್ದಾರಿಯಾಗಿರುತ್ತದೆ.
6. ಪ್ರತಿ ವಿದ್ಯಾರ್ಥಿಯು ಹಾಗೂ ಪರೀಕ್ಷಾ ಸಿಬ್ಬಂದಿ ಆರೋಗ್ಯ ಸೇತು ಆ್ಯಪ್ ಅಳವಡಿಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ. ಪರೀಕ್ಷೆಯ ಪ್ರಾರಂಭವಾಗುವ ಮುನ್ನಾ ಹಿರಿಯ ಮೇಲ್ವಿಚಾರಕರು Thermal Scanner ಮೂಲಕ ದೇಹದ ತಾಪಮಾನ ನೋಡಿ ಸುರಕ್ಷಿತವಾಗಿರುವುದನ್ನು ಧೃಢೀಕರಿಸಿಕೊಳ್ಳುವುದು.
7. ವಿದ್ಯಾರ್ಥಿಗಳು/ಪರೀಕ್ಷಾ ಸಿಬ್ಬಂದಿ ನೆಗಡಿ, ಕೆಮ್ಮು, ಜ್ವರ, ಉಸಿರಾಟದ ತೊಂದರೆಯಿಂದ ಬಳಲುತಿದ್ದಲ್ಲಿ ಅವರನ್ನು ಸ್ಥಳೀಯ ವೈದ್ಯಾಧಿಕಾರಿಗಳ ಕಡೆ ಕರೆದುಕೊಂಡು ಹೋಗಲು ವ್ಯವಸ್ಥೆ ಮಾಡುವುದು.
8. ಕಂಟೇನ್‌ಮೆಂಟ್ ಏರಿಯಾದಲ್ಲಿ ಬರುವ ಸಿಬ್ಬಂದಿಗಳನ್ನು ಹಾಗೂ ಕ್ವಾರಂಟೈನಲ್ಲಿರುವ ಸಿಬ್ಬಂದಿಗಳನ್ನು ಪರೀಕ್ಷಾ ಕಾರ್ಯಕ್ಕೆ ಬಳಸಕೂಡದು.

9. ಕಾಲೇಜು/ಸ್ನಾತಕೋತ್ತರ ವಿಭಾಗ/ಸ್ನಾತಕೋತ್ತರ ಕೇಂದ್ರದಲ್ಲಿನ ಶೌಚಾಲಯದಲ್ಲಿ ವಾಶ್ ಬೇಸಿನ್ ಹತ್ತಿರ ಹ್ಯಾಂಡ್ ವಾಶ್‌ಗೆ ವ್ಯವಸ್ಥೆ ಮಾಡುವುದು.
10. ಪರೀಕ್ಷಾರ್ಥಿಗಳು ಹಾಗೂ ಪರೀಕ್ಷಾ ಸಿಬ್ಬಂದಿ ತಮ್ಮದೇ ನೀರಿನ ಬಾಟಲ್ ಹಾಗೂ ಊಟ/ತಿಂಡಿಯನ್ನು ತೆಗೆದುಕೊಂಡು ಬರುವುದು.
11. ಪರೀಕ್ಷಾರ್ಥಿಗಳು ತಮ್ಮ ಪೆನ್ನು, ವೈಯಕ್ತಿಕ ಸ್ಯಾನಿಟೈಸರ್ ಹಾಗೂ ಇತರೆ ಪರೀಕ್ಷಾ ಸಾಮಗ್ರಿಗಳನ್ನು ಇನ್ನೊಬ್ಬರೊಡನೆ ಹಂಚಿಕೊಳ್ಳುವಂತಿಲ್ಲ.
12. ಪರೀಕ್ಷಾ ಕೊಠಡಿಯಲ್ಲಿ ಸ್ವಚ್ಛ ಗಾಳಿ ಬರಲು ಕಿಟಕಿ ತೆರೆದಿರಬೇಕು.
13. ಒಂದು ಬೆಂಚಿಗೆ ಒಬ್ಬ ವಿದ್ಯಾರ್ಥಿಯನ್ನು ಮಾತ್ರ ಕೂಡಿಸುವುದು.
14. ಪರೀಕ್ಷಾ ಅವಧಿಯಲ್ಲಿ ಒಬ್ಬ ಮಹಿಳಾ ಸಿಬ್ಬಂದಿ ಅಗತ್ಯವಾಗಿ ಇರಬೇಕು.
15. ಒಂದು ಪರೀಕ್ಷೆ ಮುಗಿದ ಕೂಡಲೇ ಎಲ್ಲಾ ಬೆಂಚುಗಳನ್ನು ಸ್ಯಾನಿಟೈಸರ್‌ನಿಂದ ಸಿಂಪಡಿಸಿ ಸ್ವಚ್ಛಗೊಳಿಸುವುದು.
16. ಆಗಿಂದಾಗ್ಗೆ ಸ್ಯಾನಿಟೈಸರ್‌ನಿಂದ ಕೈಗಳನ್ನು ಸ್ವಚ್ಛ ಮಾಡಿಕೊಳ್ಳುವ ಮೂಲಕ ಆರೋಗ್ಯವನ್ನು ಕಾಪಾಡಿಕೊಳ್ಳುವುದು.
17. ಕೋವಿಡ್-19 ಹಿನ್ನೆಲೆಯಲ್ಲಿ ಆರೋಗ್ಯದ ಹಿತದೃಷ್ಟಿಯಿಂದ ಸರ್ಕಾರವು ಹೊರಡಿಸಿರುವ ಎಲ್ಲಾ ಮುನ್ನೆಚ್ಚರಿಕಾ ಕ್ರಮಗಳನ್ನು ಪ್ರತಿಯೊಬ್ಬರೂ ವೈಯಕ್ತಿಕವಾಗಿ ಪಾಲಿಸುವುದು.
18. ಪ್ರತಿ ಕಾಲೇಜಿಗೆ ಒಬ್ಬ ಕೋವಿಡ್-19 ನೋಡೆಲ್ ಅಧಿಕಾರಿಯನ್ನು ನೇಮಕ ಮಾಡುವುದು.

ಕುಲಸಚಿವರು (ಪರೀಕ್ಷಾಂಗ)

ಕುಲಸಚಿವರು (ಪರೀಕ್ಷಾಂಗ)
ದಾವಣಗೆರೆ ವಿಶ್ವವಿದ್ಯಾನಿಲಯ.
ಶಿವಗಂಗೋತ್ರಿ, ದಾವಣಗೆರೆ-577002

ಗೆ,

ವಿಶ್ವವಿದ್ಯಾನಿಲಯಕ್ಕೊಳಪಡುವ ಎಲ್ಲಾ ಸ್ನಾತಕ / ಸ್ನಾತಕೋತ್ತರ / ಬಿ.ಇಡಿ / ಬಿ.ಪಿ.ಇಡಿ ಪದವಿ ವಿಭಾಗಗಳ ಮುಖ್ಯಸ್ಥರು / ಸಂಯೋಜನಾಧಿಕಾರಿಗಳು / ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

**ಪ್ರತಿ.**

1. ಮಾನ್ಯ ಕುಲಪತಿಗಳ/ಕುಲಸಚಿವರ ಆಪ್ತ ಕಾರ್ಯಾಲಯ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
2. ಪ್ರಾದೇಶಿಕ ಮುಖ್ಯಸ್ಥರು, ಲಾಜಿಸಿಸ್,ದಾವಣಗೆರೆ.
3. ಕಛೇರಿ ಪ್ರತಿ.

# ದಾವಣಗೆರೆ ವಿಶ್ವವಿದ್ಯಾನಿಲಯ

ಪರೀಕ್ಷಾ ವಿಭಾಗ, ಶಿವಗಂಗೋತ್ರಿ, ದಾವಣಗೆರೆ-577 002.

ದೂರವಾಣಿ ಸಂಖ್ಯೆ: 08192-208420,208104

ಸಂಖ್ಯೆ:ದಾವಿವಿ:ಪವಿ:ಆಶಾ:2020-21/467 ದಿನಾಂಕ: 27-07-2020

**ಪರೀಕ್ಷಾ ಮಾರ್ಗಸೂಚಿಗಳು**

ವಿಷಯ: ಕೋವಿಡ್-19ರ ಹಿನ್ನಲೆಯಲ್ಲಿ 2020 ನೇ ಸಾಲಿನ ಸ್ನಾತಕ ಬಿ.ಇಡಿ ಪದವಿಯ ಎಲ್ಲಾ ಸೆಮಿಸ್ಟರ್ ಗಳ ಬ್ಯಾಕ್ ಲಾಗ್ ಪರೀಕ್ಷೆಗಳನ್ನು ನಡೆಸುವ ಹಾಗೂ 1ನೇ ಮತ್ತು 3ನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಬಡ್ತಿ ನೀಡುವ ಬಗ್ಗೆ

ಉಲ್ಲೇಖ :1. UGC ಪತ್ರ ಸಂಖ್ಯೆ D.O.No.F.1-1/2020(Secy) ದಿನಾಂಕ:08-07-2020

2. ಸಿಂಡಿಕೇಟ್ ಸಭೆಯ ಅನುಮೋದನೆಯ ದಿನಾಂಕ: 16-07-2020.
3. ವಿದ್ಯಾ ವಿಷಯಕ ಪರಿಷತ್ ಸಭೆಯ ಅನುಮೋದನೆಯ ದಿನಾಂಕ: 17-07-2020.
4. ಡೀನರ ಸಭೆಯ ನಿರ್ಣಯದ ಪತ್ರ ಸಂಖ್ಯೆ ದಾವಿ:ಪವಿ:ಆಶಾ:2020-21; ದಿನಾಂಕ:24/07/2020.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಭಾರತ ಸರ್ಕಾರದ ಗೃಹ ಇಲಾಖೆ ಕಾಲಕಾಲಕ್ಕೆ ಹೊರಡಿಸುವ SOP ಗಳನ್ನು ಪಾಲಿಸುವ ಶರತ್ತುಗಳಿಗೆ ಒಳಪಟ್ಟು ಸಾಂಪ್ರದಾಯಿಕ ಪದ್ಧತಿಯಲ್ಲಿ ಪರೀಕ್ಷೆಯನ್ನು ಸೆಪ್ಟೆಂಬರ್-2020ರ ತಿಂಗಳಲ್ಲಿ ಜರುಗಿಸಲಾಗುವುದು.

2020 ನೇ ಸಾಲಿನ ಸ್ನಾತಕ ಬಿ.ಇಡಿ ಪದವಿಯ ಎಲ್ಲಾ ಸೆಮಿಸ್ಟರ್ ಗಳ ಬ್ಯಾಕ್ ಲಾಗ್ ಪರೀಕ್ಷೆಗಳನ್ನು ಸೆಪ್ಟೆಂಬರ್-2020ರಲ್ಲಿ ನಡೆಸಲಾಗುವುದು. ವಿದ್ಯಾರ್ಥಿಗಳು ಪರೀಕ್ಷೆಗೆ ಕೂರುವುದು ಕಡ್ಡಾಯವಲ್ಲ. ಈ ಸಂಬಂಧ ಈ ಕೆಳಗಿನ ಮಾರ್ಗಸೂಚಿಯಂತೆ ನಡೆಯಲು ಸೂಚಿಸಲಾಗಿದೆ.

1. ಸ್ನಾತಕ ಬಿ.ಇಡಿ ಪದವಿಯ ಯಾವುದೇ ವಿದ್ಯಾರ್ಥಿಗಳು 1ನೇ ಮತ್ತು 3ನೇ ಸೆಮಿಸ್ಟರ್ ನಲ್ಲಿ ಥಿಯರಿ ಪರೀಕ್ಷೆಗಳಲ್ಲಿ ಅನುತ್ತೀರ್ಣರಾಗಿ ಬಾಕಿ ಉಳಿಸಿಕೊಂಡಿದ್ದಲ್ಲಿ (Backlog Subject) ಅಂತಹ ವಿದ್ಯಾರ್ಥಿಗಳು ಪರೀಕ್ಷೆಯನ್ನು ಬರೆಯುವುದು.
2. 2020ನೇ ಸಾಲಿನಲ್ಲಿ ಸ್ನಾತಕ ಬಿ.ಇಡಿ ಪದವಿಯ 1ನೇ ಮತ್ತು 3ನೇ ಸೆಮಿಸ್ಟರ್ ಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮಾತ್ರ 1ನೇ ಮತ್ತು 3ನೇಯ ಸೆಮಿಸ್ಟರ್ ಪರೀಕ್ಷೆಗಳನ್ನು ನಡೆಸದೆ ವಿನಾಯಿತ್ತಿ ನೀಡಿ ಮುಂದಿನ ಸೆಮಿಸ್ಟರ್ ಗೆ ಬಡ್ತಿ ನಿಡಲಾಗುವುದು
3. ಬಿ.ಇಡಿ ಪದವಿಯ 1ನೇ ಮತ್ತು 3ನೇ ಸೆಮಿಸ್ಟರ್ ನ ಆಂತರಿಕ ಅಂಕಗಳಿಗೆ ಸಂಬಂಧಿಸಿದಂತೆ ದಿನಾಂಕ: 01-08-2020 ರಿಂದ 31-08-2020 ರೊಳಗೆ "Micro-Teaching, Test, Seminar, Phychology Lab" ಗಳನ್ನು. ಪೂರೈಸಿ ದಿನಾಂಕ:08-09-2020ರ ಒಳಗಾಗಿ ಡೀನರ ಅನುಮೋದನೆಯೊಂದಿಗೆ HardCopyನ್ನು ಕುಲಸಚಿವರು (ಪರೀಕ್ಷಾಂಗ) ರವರ ಕಛೇರಿಗೆ ಕಡ್ಡಾಯವಾಗಿ ಸಲ್ಲಿಸಬೇಕು. ನಂತರದ ದಿನಗಳಲ್ಲಿ ಅಂತರಿಕ ಅಂಕಗಳನ್ನು Online/Portal ಮುಖಾಂತರ ಸಲ್ಲಿಸಲು ದಿನಾಂಕವನ್ನು ತಿಳಿಸಲಾಗುವುದು.
4. ಪರೀಕ್ಷಾ ವೇಳಾಪಟ್ಟಿಯನ್ನು ಮುಂದಿನ ದಿನಗಳಲ್ಲಿ ಪ್ರಕಟಿಸಲಾಗುವುದು.

ಕುಲಸಚಿವರು (ಪರೀಕ್ಷಾಂಗ),
ದಾವಣಗೆರೆ ವಿಶ್ವವಿದ್ಯಾನಿಲಯ,
ಶಿವಗಂಗೋತ್ರಿ, ದಾವಣಗೆರೆ-577002

ಗೆ.

ದಾವಣಗೆರೆ ವಿಶ್ವವಿದ್ಯಾನಿಲಯಕ್ಕೊಳಪಡುವ ಸ್ನಾತಕ ಬಿ.ಇಡಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

ಪ್ರತಿ.

1. ಮಾನ್ಯ ಕುಲಪತಿಗಳ/ಕುಲಸಚಿವರ ಆಪ್ತ ಕಾರ್ಯಾಲಯ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
2. ಪ್ರಾದೇಶಿಕ ಮುಖ್ಯಸ್ಥರು, ಲಾಜಿಸಿಸ್, ದಾವಣಗೆರೆ.
3. ಕಛೇರಿ ಪ್ರತಿ.